ಒಳಗೆಲ್ಲ ಪರಿಕರಗಳನ್ನು ಜೋಡಿಸುತ್ತಿದ್ದುದು ನಾಗುವೇ. ಮನೆಗಳ ಮುಂದೆ ದೊಡ್ಡದಾದ ರಂಗವಲ್ಲಿಯ ಹಸೆ. ಒಳಗೆ ಕೂಡ ಆಕರ್ಷಕ ಚಿತ್ತಾರಗಳು. ಡೈರೆಕ್ಟರ್ ಆರ್ಮುಗಂ ಕೂಡ ಇತ್ತೀಚೆಗೆ, “ನಾಗು, ಎಲ್ಲಾ ಸರಿಯಾಗಿ ಜೋಡಿಸು. ಒಂದು ಮಧ್ಯಮ ವರ್ಗದ ಮನೆಯಂತಿರಬೇಕು. ಆ ಮೊರ ಮೇಲೆತ್ತಿ ಹಾಕು. ಪಕ್ಕದಲ್ಲೇ ಅಕ್ಕಿಯ ಚೀಲ. ಹೀರೋಯಿನ್ ಬಂದು ತೆಗೀತಾಳೆ. ಹ್ಞಾಂ” ಎಂದು ಹೇಳುತ್ತಿದ್ದರೆ ನಾಗು ಎಲ್ಲ ಚಕಚಕನೆ ಮಾಡುತ್ತಿದ್ದಳು. ಆಂಜನಪ್ಪ, ಮಾಂಕಾಳಮ್ಮ ಪೂರ್ತಿ ಖುಷಿಯಾಗಿದ್ದರು. ಏಕೆಂದರೆ ದುಡ್ಡು ಅವರಿಗೇ

